2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ
ಚಿಕ್ಕಮಗಳೂರು

ಸತ್ರ ಮೊಕದ್ದಮೆ ನಂಃ128/2017

| | | | |
|---|---|---|---|
| ಸಾಕ್ಷಿದಾರರ ಹೆಸರು | - | ಕಿರಣ್ ಕುಮಾರ್ | ಪಿಡಬ್ಲೂ-1 |
| ತಂದೆಯ ಹೆಸರು | - | ತಿಮ್ಮೇಗೌಡ | ಸಿಡಬ್ಲೂ - 1 |
| ವಯಸ್ಸು | - | 35 ವರ್ಷ | |
| ಉದ್ಯೋಗ | - | ಆಟೋ ಚಾಲಕ | |
| ವಾಸ ಸ್ಥಳ | - | ತಡಬೇನಹಳ್ಳಿ | |

ದಿನಾಂಕಃ 29.07.2022 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದ-

1. ಆರೋಪಿ ಪಲ್ಲವಿ ನನ್ನ ಹೆಂಡತಿ. ಚಾಸಾ.2 ನನ್ನ ತಂದೆ. ಚಾಸಾ.3, 4 ಗೊತ್ತು. ಉಳಿದ ಸಾಕ್ಷಿದಾರರು ಗೊತ್ತಿಲ್ಲ.

2. 2014 ನೇ ಇಸವಿಯಲ್ಲಿ ನನ್ನ ಮತ್ತು ಆರೋಪಿಯ ಮದುವೆ ಚಿಕ್ಕಮಗಳೂರಿನ ಎ ಐ ಟಿ ಸರ್ಕಲ್ ನಲ್ಲಿರುವ ಒಕ್ಕಲಿಗರ ಕಲ್ಯಾಣ ಮಂಟಪದಲ್ಲಿ ಗುರುಹಿರಿಯರ ಸಮಕ್ಷಮದಲ್ಲಿ ನಡೆದಿತ್ತು. ಮದುವೆಯ ನಂತರ ನಾನು ಮತ್ತು ಆರೋಪಿ ತಡಬೇನಹಳ್ಳಿ ಗ್ರಾಮದಲ್ಲಿರುವ ನಮ್ಮ ಸ್ವಂತ ಮನೆಯಲ್ಲಿ ನನ್ನ ತಂದೆ ತಾಯಿಯ ಜೊತೆ ವಾಸವಾಗಿದ್ದೆವು. ನಮ್ಮ ಮದುವೆಯಾದ ಮೂರು ತಿಂಗಳಿಗೆ ಆರೋಪಿ ಗರ್ಭಿಣಿಯಾದಳು. ನಂತರ ಆಕೆ 7 ತಿಂಗಳ ಗರ್ಭಿಣಿಯಾಗಿದ್ದಾಗ ಬೆಂಗಳೂರಿನಲ್ಲಿರುವ ಆಕೆಯ ತಾಯಿಯ ಮನೆಗೆ ಹೋದಳು. ಅಲ್ಲಿ ನನ್ನ ಹೆಂಡತಿಗೆ ಹೆರಿಗೆಯಾಗಿ ಹೆಣ್ಣು ಮಗುವಿಗೆ ಜನ್ಮ ನೀಡಿರುತ್ತಾಳೆ. ಮಗುವಿಗೆ 9 ತಿಂಗಳು ಪೂರ್ಣವಾದ ನಂತರ ನನ್ನ ಹೆಂಡತಿ ಮಗುವಿನೊಂದಿಗೆ ತಡಬೇನಹಳ್ಳಿಯ ನಮ್ಮ ಮನೆಗೆ ಬಂದಳು. ನನ್ನ ಹೆಂಡತಿ ಬೇರೆ ಮನೆ

ಮಾಡು ಇಲ್ಲದಿದ್ದರೆ ನಾನು ಬೆಂಗಳೂರಿಗೆ ವಾಪಾಸ್ಸು ಹೋಗುತ್ತೇನೆ ಎಂದು ಗಲಾಟೆ ಮಾಡುತ್ತಿದ್ದಳು. ನಂತರ ನಾನು ನಮ್ಮ ಊರಿನಿಂದ ಕಾಲು ಕಿಲೋ ಮೀಟರ್ ದೂರವಿದ್ದ ಉದ್ದೇಬೋರನಹಳ್ಳಿಯ ಸರ್ಕಲ್ ನಲ್ಲಿ ಬಾಡಿಗೆ ಮನೆ ಮಾಡಿ ಅಲ್ಲಿ ನಾನು, ನನ್ನ ಹೆಂಡತಿ ಮತ್ತು ಮಗು ವಾಸವಾಗಿದ್ದೆವು. ನಾನು ಸ್ವಂತ ಆಟೋವನ್ನು ಚಾಲನೆ ಮಾಡಿಕೊಂಡು ಜೀವನ ನಡೆಸುತ್ತಿದ್ದೇನೆ. ನಾನು ಪ್ರತಿ ದಿನ ಬೆಳಿಗ್ಗೆ 8.30-9.00 ಗಂಟೆಗೆ ಉದ್ದೇಬೋರನಹಳ್ಳಿಯಿಂದ ಚಿಕ್ಕಮಗಳೂರಿಗೆ ಬಂದು ಆಟೋ ಚಲಾಯಿಸಿ ಪುನಃ ಉದ್ದೇಬೋರನಹಳ್ಳಿಗೆ ರಾತ್ರಿ 7.00-8.00 ಗಂಟೆಗೆ ಹೋಗುತ್ತಿದ್ದೆನು.

3. ನಾವು ಉದ್ದೇಬೋರನಹಳ್ಳಿಯಲ್ಲಿ ಬಾಡಿಗೆ ಮನೆಯಲ್ಲಿ ವಾಸವಿದ್ದ ಸಮಯದಲ್ಲಿ ದಿನಾಂಕ 01.06.2016 ರಂದು ನಾನು ಪ್ರತೀ ನಿತ್ಯದಂತೆ ಚಿಕ್ಕಮಗಳೂರಿಗೆ ಹೋಗಿ ಆಟೋ ಚಲಾಯಿಸಿ ರಾತ್ರಿ 7.30 -8.00 ಗಂಟೆ ಸಮಯಕ್ಕೆ ಮನೆಗೆ ವಾಪಾಸ್ಸು ಬಂದೆನು. ಆಗ ನನ್ನ ಮಗು ಮಲಗಿತ್ತು. ಆರೋಪಿ ಊಟ ಮಾಡುತ್ತಿದ್ದಳು. ಆಗ ನಾನು ಕೈ ಕಾಲು ತೊಳೆದುಕೊಂಡು ಮಂಚದ ಮೇಲೆ ಮಲಗಿಕೊಂಡು ನಿನ್ನ ಊಟ ಆದ ಮೇಲೆ ನನಗೆ ಊಟ ಹಾಕಿಕೊಡು ಎಂದು ಪಲ್ಲವಿಗೆ ಹೇಳಿದೆನು. ಆಗ ಆಕೆ ಊಟವನ್ನು ನೀನೇ ಬೇಕಾದರೆ ಊಟ ಹಾಕಿಕೊಂಡು ತಿನ್ನಲೋ ಎಂದು ಏಕವಚನದಲ್ಲಿ ಬೈದಳು. ಆಗ ನನಗೆ ಬೇಜಾರಾಗಿ ಹಾಗೇ ಸುಮ್ಮನೆ ಮಲಗಿಕೊಂಡೆನು. ಆಗ ಪಲ್ಲವಿ ಬಂದು ನನ್ನ ಹೊಟ್ಟೆಯ ಭಾಗಕ್ಕೆ ಚಾಕುವಿನಿಂದ ತಿವಿದಳು. ಆಗ ನಾನು ಪಲ್ಲವಿಯನ್ನು ದೂಡಿ ಆಚೆಗೆ ಓಡಿ ಹೋದೆನು. ಆ ಸಮಯದಲ್ಲಿ ನಾನು ಹಸಿರು ಬಣ್ಣದ ಟೀ ಶರ್ಟ್ ಮತ್ತು ಚಡ್ಡಿಯನ್ನು ಹಾಕಿಕೊಂಡಿದ್ದೆನು ಮತ್ತು ನನ್ನ ಹೆಂಡತಿ ತಿವಿದಿದ್ದ ಚಾಕು ನನ್ನ ಹೊಟ್ಟೆಯಲ್ಲಿಯೇ ಸಿಕ್ಕಿಕೊಂಡಿತ್ತು. ಆ ರೀತಿ ನಾನು ಉದ್ದೇಬೋರನಹಳ್ಳಿಯ ಗೇಟ್ ಬಳಿ ಇರುವ ಬೇಕರಿ ಹತ್ತಿರ ಓಡಿ ಬಂದಾಗ

ಅಲ್ಲಿ ಚಾಸಾ.3 ಓಚಲೇಗೌಡ, ಚಾಸಾ.4 ಭರತ್ ಇದ್ದರು. ಆಗ ಅಲ್ಲಿಗೆ ನನ್ನ ತಂದೆ ಚಾಸಾ.2 ತಿಮ್ಮೇಗೌಡ ಸಹ ಬಂದರು. ನಂತರ ಚಾಸಾ.2 ರಿಂದ 4 ರವರು ನನ್ನನ್ನು ಸಖರಾಯಪಟ್ಟಣದ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋದರು. ಆದರೆ ಅವರು ನನ್ನನ್ನು ಚಿಕ್ಕಮಗಳೂರಿನ ದೊಡ್ಡ ಆಸ್ಪತ್ರೆಗೆ ಆ್ಯಂಬುಲೆನ್ಸ್ ನಲ್ಲಿ ಕಳುಹಿಸಿದರು. ಅಲ್ಲಿನ ವೈಧ್ಯರು ಚಾಕುವನ್ನು ತೆಗೆದರೆ ಹೆಚ್ಚು ಬ್ಲೀಡಿಂಗ್ ಆಗುತ್ತದೆ ಎಂದು ಹಾಗೇ ಬ್ಯಾಂಡೇಜ್ ಹಾಕಿ ನನ್ನನ್ನು ಮಂಗಳೂರಿನ ಫಾದರ್ ಮುಲ್ಲರ್ ಆಸ್ಪತ್ರೆಗೆ ಆ್ಯಂಬುಲೆನ್ಸ್ ನಲ್ಲಿ ಕಳುಹಿಸಿದರು. ಸದರಿ ಆಸ್ಪತ್ರೆಯಲ್ಲಿ ನಾನು ಒಳರೋಗಿಯಾಗಿ ದಾಖಲಾಗಿ ಸುಮಾರು 10 ದಿನಗಳ ಕಾಲ ಚಿಕಿತ್ಸೆ ಪಡೆದುಕೊಂಡಿದ್ದೇನೆ. ಸದರಿ ಆಸ್ಪತ್ರೆಯಲ್ಲಿ ವೈಧ್ಯರು ನನ್ನ ಹೊಟ್ಟೆಯಲ್ಲಿ ಸಿಕ್ಕಿಕೊಂಡಿದ್ದ ಚಾಕುವನ್ನು ತೆಗೆದು ಆಪರೇಷನ್ ಮಾಡಿ ಹೊಲಿಗೆ ಹಾಕಿದ್ದಾರೆ. ನಾನು ಘಟನೆಯಾದ ದಿನ ಅಂದರೆ ದಿನಾಂಕ 01.06.2016 ರಂದು ಮಂಗಳೂರಿನ ಫಾದರ್ ಮುಲ್ಲರ್ ಆಸ್ಪತ್ರೆಗೆ ಹೋಗಿದ್ದೇನೆ. ಮಾರನೇ ದಿನ ಅಲ್ಲಿ ನನಗೆ ಆಪರೇಷನ್ ಮಾಡಿದ್ದಾರೆ. ಅದೇ ದಿನ ಅಂದರೆ ಘಟನೆಯ ಮಾರನೇ ದಿನ ಸಖರಾಯಪಟ್ಟಣ ಪೊಲೀಸರು ಫಾದರ್ ಮುಲ್ಲರ್ ಆಸ್ಪತ್ರೆಗೆ ಬಂದು ನನ್ನನ್ನು ವಿಚಾರಿಸಿದರು. ಆಗ ನಾನು ಮನೆಯಲ್ಲಿ ಮಲಗಿದ್ದಾಗ ನನ್ನ ಹೆಂಡತಿ ನನಗೆ ಚಾಕುವಿನಿಂದ ತಿವಿದಿದ್ದಾಗಿ ತಿಳಿಸಿದೆನು. ಆಗ ಅವರು ಅದನ್ನು ಬರೆದುಕೊಂಡು ನನ್ನ ಸಹಿಯನ್ನು ಪಡೆದುಕೊಂಡಿದ್ದಾರೆ. ಸದರಿ ಹೇಳಿಕೆಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಸದರಿ ಹೇಳಿಕೆ ಮತ್ತು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಸದರಿ ಹೇಳಿಕೆಯ ದೂರನ್ನು ನಿಪಿ.1 ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.1(ಎ) ಎಂದು ಗುರುತಿಸಲಾಯಿತು.

4. ಉದ್ದೇಬೋರನಹಳ್ಳಿಯಲ್ಲಿ ನಾನು ನನ್ನ ಹೆಂಡತಿ ಮತ್ತು ಮಗುವಿನೊಂದಿಗೆ

ವಾಸವಿದ್ದ ಮನೆಯಲ್ಲಿ ಒಂದು ಅಡುಗೆ ಮನೆ ಮತ್ತು ಹಾಲ್ ಇತ್ತು. ಸದರಿ ಮನೆ ಮೊದಲನೇ ಮಹಡಿಯಲ್ಲಿ ಇತ್ತು. ಅದರ ಮೇಲೆ ಯಾವುದೇ ಮನೆಗಳು ಇರಲಿಲ್ಲ. ಘಟನೆಯ ದಿನ ನಾನು ನಮ್ಮ ಮನೆಯ ಹಾಲ್ ನಲ್ಲಿದ್ದ ಮಂಚದ ಮೇಲೆ ಮಲಗಿದ್ದೆನು. ಸಾಕ್ಷಿಗೆ ಒಂದು ಫೋಟೋವನ್ನು ತೋರಿಸಲಾಗಿ ಸದರಿ ಫೋಟೋದಲ್ಲಿ ಕಂಡು ಬರುವ ಮಂಚವನ್ನು ನಮ್ಮ ಮನೆಯ ಹಾಲಿನಲ್ಲಿ ಹಾಕಲಾಗಿತ್ತು ಅದರ ಮೇಲೆ ನಾನು ಮಲಗಿದ್ದಾಗಲೇ ನನ್ನ ಹೆಂಡತಿ ಬಂದು ನನ್ನ ಹೊಟ್ಟೆಗೆ ಚಾಕುವಿನಿಂದ ತಿವಿದಿದ್ದಾಳೆ ಎಂದು ನುಡಿದಿರುತ್ತಾರೆ. ಸದರಿ ಫೋಟೋವನ್ನು ನಿಪಿ.2 ಎಂದು ಗುರುತಿಸಲಾಯಿತು. ಘಟನೆಯ ದಿನ ನನ್ನ ಹೆಂಡತಿ ನನಗೆ ಹೊಟ್ಟೆಗೆ ತಿವಿದ ಚಾಕುವನ್ನು ಫಾದರ್ ಮುಲ್ಲರ್ ಆಸ್ಪತ್ರೆಯಲ್ಲಿ ವೈಧ್ಯರು ತೆಗೆದಿದ್ದಾರೆ ಅದನ್ನು ನೋಡಿದರೆ ಗುರುತಿಸುತ್ತೇನೆ.

5. ಬಿಳಿಯ ಬಟ್ಟೆಯಲ್ಲಿ ಅರಗು ಮಾಡಿ ಎಫ್ ಎಸ್ ಎಲ್ ಸೀಲು ಮಾಡಲಾಗಿದ್ದ ಪ್ಯಾಕೆಟ್ ನ್ನು ಆರೋಪಿ ಪರ ವಕೀಲರು ಮತ್ತು ಸರ್ಕಾರಿ ಅಭಿಯೋಜಕರ ಸಮಕ್ಷಮ ತೆರೆದು ಸಾಕ್ಷಿಗೆ ತೋರಿಸಲಾಗಿ ಅದರಲ್ಲಿದ್ದ ಹಸಿರು ಬಣ್ಣದ ಹ್ಯಾಂಡಲ್ ಉಳ್ಳ ರಕ್ತದ ಕಲೆಗಳು ಕಂಡುಬರುವ ಒಂದು ಸ್ಟೇನ್ ಲೆಸ್ ಸ್ಟೀಲ್ ಚಾಕುವನ್ನು ಸಾಕ್ಷಿ ನೋಡಿ ಗುರುತಿಸಿ ಆ ದಿನ ನನ್ನ ಹೆಂಡತಿ ನನ್ನ ಹೊಟ್ಟೆಗೆ ತಿವಿದ ಚಾಕು ಅದೇ ಎಂದು ನುಡಿದ ಮೇರೆಗೆ ಅದನ್ನು ಮು.ಮಾ.1 ಎಂದು ಗುರುತಿಸಲಾಯಿತು.

6. ಘಟನಾ ಸಮಯದಲ್ಲಿ ನಾನು ಧರಿಸಿದ್ದ ಬಟ್ಟೆಗಳಿಗೆ ರಕ್ತದ ಕಲೆಗಳು ಆಗಿದ್ದವು. ಅದನ್ನು ಫಾದರ್ ಮುಲ್ಲರ್ ಆಸ್ಪತ್ರೆಯಲ್ಲಿನ ವೈಧ್ಯರು ತೆಗೆದು ಡಸ್ಟ್ ಬಿನ್ ಗೆ ಹಾಕಿದ್ದರು. ಅವು ನನಗೆ ಪುನಃ ಸಿಗಲಿಲ್ಲ. ನನ್ನ ಹೆಂಡತಿ ನನಗೆ ಚಾಕುವಿನಿಂದ ತಿವಿದಾಗ ನನಗೆ ಆಗಿದ್ದ ಗಾಯಗಳ ಫೋಟೋಗಳು ನಮ್ಮ ಮನೆಯಲ್ಲಿ ಇವೆ.

(ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರು ಸದರಿ ಫೋಟೋಗಳನ್ನು ಹಾಜರುಪಡಿಸುವ ಸಲುವಾಗಿ ಸಾಕ್ಷಿಯ ಮುಂದಿನ ಮುಖ್ಯ ವಿಚಾರಣೆಯನ್ನು ಮುಂದೂಡಲು ಕೋರಿದ ಮೇರೆಗೆ ಸಾಕ್ಷಿಯ ಮುಂದಿನ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು. )

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ

ಹೇಮಾ.